ಓ.ಎಸ್ 240/2018

ಪಿ.ಡಬ್ಲ್ಯೂ.1

ದಿನಾಂಕಃ 21.08.2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಸ್ ಎನ್ ಕೆ ವಕೀಲರಿಂದಃ**

ನನ್ನ ತಾಯಿ ನನಗೆ ದಿಃ19.02.2001ರಂದು ವಿಲ್ ನ್ನು ಮಾಡಿರುತ್ತಾರೆ. ನನಗೆ ವಿಲ್ ನಮ್ಮ ಮನೆಗೆ ಸುಣ್ಣ ಹಾಗೂ ಬಣ್ಣ ಬಳಿಯುವ ಸಮಯದಲ್ಲಿ ಸಿಕ್ಕಿರುತ್ತದೆ. ಸದರಿ ವಿಲ್ ಗೆ ಕಮರನಾಯಕ, ಮುದ್ದರಾಮೇಗೌಡ, ಹೆಚ್ ಡಿ ದೇವನಾಯಕ ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ವಿಲ್ ನ್ನು ಸುಬ್ರಮಣಿ ಎನ್ನುವ ಬರಹಗಾರರು ಬರೆದಿರುತ್ತಾರೆ. ವಿಲ್ ಗೆ ಸಹಿ ಮಾಡಿರುವ ಸಾಕ್ಷಿದಾರರು ಯಾರೂ ಬದುಕಿರುವುದಿಲ್ಲ. 2001ರಲ್ಲಿ ವಿಲ್ ನ್ನು ಬರೆದು 2012ರವರೆಗೆ ನನಗೆ ವಿಲ್ ಬಗ್ಗೆ ನನ್ನ ತಾಯಿ ತಿಳಿಸಿರುವುದಿಲ್ಲ. ನಿಪಿ1ನ್ನು ನೀವು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನನ್ನ ತಾಯಿ ಸಹಿ ಮಾಡುವಷ್ಟು ವಿದ್ಯಾಭ್ಯಾಸ ಮಾಡಿರುತ್ತಾರೆ. ಅವರು ಆಂಗ್ಲಭಾಷೆಯಲ್ಲಿ ಸಹಿ ಹಾಕುತ್ತಿದ್ದರು. ನಿಪಿ1ನ್ನು ಬರೆಯುವ ಸಮಯದಲ್ಲಿ ನನ್ನ ತಾಯಿಗೆ 75ವರ್ಷವಾಗಿರಬಹುದು. ನಿಪಿ1ರಲ್ಲಿ ಕಂಡುಬರುವ ಸಹಿ ನಿಮ್ಮ ತಾಯಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಪಿ1ರಲ್ಲಿ ಕಂಡುಬರುವ ಒಕ್ಕಣೆಗಳನ್ನು ನೀವು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ತಂದೆ ಹಾಗೂ ತಾಯಿ ಅವರಿಗೆ ಬರುತ್ತಿದ್ದ ಪಿಂಚಣಿಯಲ್ಲಿ ಜೀವನ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ನೀವು ನಿಮ್ಮ ವಾದಪತ್ರದಲ್ಲಿ ನಿಪಿ1 ಪೆಟ್ಟಿಗೆಯಲ್ಲಿ ಸಿಕ್ಕಿರುವುದು ಎಂದು ಹೇಳಿದ್ದೀರಿ ಅದು ಸುಳ್ಳು ಎಂದರೆ ಸರಿಯಲ್ಲ. ನಿಪಿ5ರಲ್ಲಿ ಆದೇಶವನ್ನು ಸಾಕ್ಷಿಗೆ ಓದಿ ಹೇಳಿದಾಗ ಸಾಕ್ಷಿ ಅದು ನನ್ನ ಪರವಾಗಿಯೇ ಆಗಿದೆ ಎಂದು ಉತ್ತರಿಸಿದ್ದಾರೆ ಹಾಗೂ ಮುಂದುವರಿದು ಸುಳ್ಳು ಎಂದು ಉತ್ತರಿಸುತ್ತಾರೆ. ವಾದಪತ್ರದಲ್ಲಿ ನೀವು ಪ್ರತಿವಾದಿ ನಿಮ್ಮ ಸ್ವಾಧೀನಕ್ಕೆ ಅಡ್ಡಿಪಡಿಸಿದ ಬಗ್ಗೆ ಪೊಲೀಸ್ ಠಾಣೆಗೆ ದೂರನ್ನು ನೀಡಿರುವ ಬಗ್ಗೆ ಬರೆಸಿದ್ದೀರಾ ಎಂದರೆ ಬರೆಸಿದ್ದೀನಿ. ಪೊಲೀಸ್ ಠಾಣೆಗೆ ನೀಡಿರುವ ದೂರನ್ನು ಹಾಜರುಪಡಿಸಿದ್ದೇನೆ. ದಾವಾಸ್ತಿಯಲ್ಲಿ ನೀವು, ಕೆ ಪಿ ಕಾಳಪ್ಪ ಹಾಗೂ ಪ್ರತಿವಾದಿ ಒಟ್ಟಾಗಿ ಸ್ವಾಧೀನದಲ್ಲಿದ್ದೀರಿ ಎಂದರೆ ಸರಿಯಲ್ಲ. ನಾನು ನನ್ನ ಜಮೀನಿನ ಮುಂಭಾಗದಲ್ಲಿ ತೆಂಗಿನ ಗಿಡ ಹಾಕಿದ್ದೇನೆ. ದಾವಾಸ್ತಿಯಲ್ಲಿ ಪ್ರತಿವಾದಿ ಕೃಷಿ ಹೊಂಡ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಿಃ04.01.2021ರಂದು NoC ಯಾಗಿ 1,000ರೂ.ಗಳನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ 2 ಪಂಪ್ ಸೆಟ್ ಗಳು ನನ್ನ

ಆಸ್ತಿಯ ಕೆಳಭಾಗದಲ್ಲಿ ಇದೆ ಎಂದು ಉತ್ತರಿಸುತ್ತಾರೆ. ಇನ್ನೊಂದು ಪಂಪ್ ಸೆಟ್ ಆಸ್ತಿಯ ಮೇಲ್ಭಾಗದಲ್ಲಿದೆ ಅದು ಪ್ರತಿವಾದಿ ಹಾಗೂ ಕೆ ಪಿ ಕಾಳಪ್ಪರವರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಪ್ರತಿವಾದಿ ಅವರೇ ಕೃಷಿ ಹೊಂಡವನ್ನು ಮಾಡಿಸಿಕೊಂಡು ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ವಿದ್ಯುತ್ ನ್ನು ಪಡೆದುಕೊಂಡು ಅವರೇ ಸ್ವಾಧೀನದಲ್ಲಿದ್ದಾರೆ ಇದು ನಿಮಗೆ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಾಯಿಯನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಹಾಗೂ ಕೆ ಪಿ ಕಾಳಪ್ಪರವರು ಭಾಗಾಂಶ ಕೋರಿ ಒಂದು ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಆ ದಾವೆಯ ನೋಟಿಸ್ ನನಗೆ ಬಂದಿದೆ. ಪ್ರತಿವಾದಿ ಹಾಗೂ ಕೆ ಪಿ ಕಾಳಪ್ಪರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನೀವು ಅವರ ಸ್ವಾಧೀನಕ್ಕೆ ಅಡ್ಡಿಪಡಿಸಿದ್ದಿರಾ ಎಂದು ದೂರು ದಾಖಲಿದ್ದೀರಾ ಎಂದರೆ ಸಲ್ಲಿಸಿಲ್ಲ. ನೀವು ನಿಪಿ1 ನ್ನು ಪ್ರೊಬೇಟ್ ಮಾಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಖಾತೆ ಬದಲಾವಣೆ ಮಾಡಿಸಿದ್ದೇನೆ. ನೀವು, ಪ್ರತಿವಾದಿ ಹಾಗೂ ಕೆ ಪಿ ಕಾಳಪ್ಪರವರು ಜಂಟಿ ಸ್ವಾಧೀನದಲ್ಲಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.